**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ.11.03.2024**

## ಪಾಟಿ ಸವಾಲುಃ ಪ್ರತಿವಾದಿಗಳ ಪರ ಶ್ರೀ.ಪಿ ವಿ ಆರ್ ವಕೀಲರಿಂದಃ

1. ನಾನು ಬಿ ಕಾಂ ವಿದ್ಯಾಬ್ಯಾಸ ಮಾಡಿರುತ್ತೇನೆ. ಈ ದಾವೆಯನ್ನು ದಾಖಲಿಸಲು ನಮ್ಮ ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಆ ರೀತಿ ನಮ್ಮ ಜಮೀನಿಗೆ ಯಾವುದೇ ಹಾನಿ ಆಗಬಾರದು ಎಂದು ಈ ದಾವೆ ಸಲ್ಲಿಸಿರುತ್ತೇನೆ. ಆ ರೀತಿ ಎಷ್ಟು ವಿಸ್ತೀರ್ಣಕ್ಕೆ ಈ ದಾವೆ ಸಲ್ಲಿಸಿದ್ದೇನೆ ಎಂದು ನೆನಪಿರುವುದಿಲ್ಲ. ದಾವಾ ಆಸ್ತಿಯ ಚೆಕ್ಕುಬಂದಿ ಪೂರ್ವಕ್ಕೆ-ರಸ್ತೆ, ಪಶ್ಚಿಮಕ್ಕೆ-ಸಾದಹಳ್ಳಿ ಬಂಡೆ, ಉತ್ತರಕ್ಕೆ-ಸರ್ವೆ ನಂ.223, ದಕ್ಷಿಣಕ್ಕೆ-ನೆನಪಿರುವುದಿಲ್ಲ. ಸದರಿ ಚೆಕ್ಕುಬಂದಿಯು ದಾವಾ ಆಸ್ತಿಯ ಚೆಕ್ಕುಬಂದಿಗೆ ತಾಳೆ ಆಗುವುದಿಲ್ಲ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ನನಗೆ ಪರಿಚಯ ಇರುವುದಿಲ್ಲ. ನನ್ನ ಜಮೀನಿನ ಪಕ್ಕ 3 ನೇ ಪ್ರತಿವಾದಿಗೆ ಸರ್ಕಾರದವರು ಜಮೀನನ್ನು ಭೋಗ್ಯಕ್ಕೆ ಕೊಟ್ಟಿರುವ ಕಾರಣ ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೇನೆ. 3 ನೇ ಪ್ರತಿವಾದಿ ಸಲ್ಲಿಸಿರುವ ಲಿಖಿತ ಹೇಳಿಕೆಯ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. ನಾನು ವಾದಿ ಕಂಪನಿಯಲ್ಲಿ 20 ವರ್ಷಗಳಿಂದ ಮ್ಯಾನೆಜಿಂಗ್ ಡೈರೆಕ್ಟರ್ ಆಗಿರುತ್ತೇನೆ.

2. ಸದರಿ ಕಂಪನಿಯು ಭೂಮಿ ಮತ್ತು ಅಪಾರ್ಟ್ಮೆಂಟ್ ನಿರ್ಮಾಣ ಮಾಡುವ ವ್ಯವಹಾರ ಹೊಂದಿರುತ್ತದೆ. ವಾದಿ ಕಂಪನಿಯು ಕಲ್ಲು ಕ್ವಾರಿ ಮಾಡುವ ವ್ಯವಹಾರ ಮಾಡುವುದಿಲ್ಲ ಎಂದರೆ ಸರಿ. ವಾದಿ ಕಂಪನಿಯು 2006 ರಲ್ಲಿ ದಾವಾ ಆಸ್ತಿಯನ್ನು ಖರೀದಿಸಿರುತ್ತದೆ. ಆದರೆ ದಿನಾಂಕ ಗೊತ್ತಿರುವುದಿಲ. ಆ ರೀತಿ 7 ಎಕರೆ 28 ಗುಂಟೆ ಆಸ್ತಿಯನ್ನು ಖರೀದಿ ಮಾಡಿರುತ್ತೇವೆ. ಆ ಸಂದರ್ಬದಲ್ಲಿ ಎ ಖರಾಬು ಭೂಮಿ ಇರುವುದು ಗೊತ್ತಿರುತ್ತದೆ. ಅದರಂತೆ 5 ಎಕರೆ 20 ಗುಂಟೆ ಎ ಖರಾಬು ಭೂಮಿ ಇತ್ತು. ಸದರಿ ಎ ಖರಾಬು ಭೂಮಿಗೆ ನಾನು ಮಾಲಿಕರಿಗೆ ಹಣ ನೀಡಿ ಖರೀದಿಸಿರುವುದಿಲ್ಲ ಎಂದರೆ ಸರಿ. ಆ ರೀತಿ ನಾನು 1 ಎಕರೆ 30 ಗುಂಟೆಗೆ ಹಣ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾವಾ ಆಸ್ತಿಯನ್ನು ಭೂ ಪರಿವರ್ತನೆ ಮಾಡಿಸಿ ನಂತರ ಖರೀದಿಸಿರುತ್ತೇನೆ. ಅದಕ್ಕೂ ಮೊದಲು 2004 ರಲ್ಲಿ ಕರಾರು ಪತ್ರ ಆಗಿತ್ತು. ಸದರಿ ಕರಾರು ಪತ್ರವನ್ನು ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸರಿ. ಸದರಿ ಕರಾರು ಆದ ಬಗ್ಗೆ ವಾದ ಪತ್ರದಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿ. ನಾನು ದಾವಾ ಆಸ್ತಿಯನ್ನು ಖರೀದಿಸುವ ಮೊದಲು ಅದರ ಮಾಲಿಕರಾದ ಶ್ರೀಮತಿ. ಅಬಿದಾ ನಹೀದ್ ರವರ ಹೆಸರಿಗೆ ಭೂ ಪರಿವರ್ತನೆ ಆಗಿರುತ್ತದೆ. ಸದರಿ ಭೂ ಪರಿವರ್ತನೆ ಆದೇಶವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಸಾಮಾನ್ಯವಾಗಿ ಭೂ ಪರಿವರ್ತನೆ ಆದೇಶದಲ್ಲಿ ಖರಾಬು ಜಮೀನನ್ನು ಸರ್ಕಾರಕ್ಕೆ ಕಾಯ್ದಿರಸಲಾಗಿದೆ ಎಂಬ ಷರತ್ತು ಇರುತ್ತದೆ ಎಂದರೆ

ಸರಿಯಲ್ಲ. ಭೂ ಪರಿವರ್ತನೆ ಆದ ನಂತರ ಶ್ರೀಮತಿ. ಅಬಿದಾ ನಹೀದ್ ರವರ ಹೆಸರಿಗೆ ಪಂಚಾಯಿತಿಯಲ್ಲಿ ಯಾವುದೇ ಖಾತೆ ಆಗಿರಲಿಲ್ಲ. ಆ ರೀತಿ ಯಾವ ವರ್ಷದಲ್ಲಿ ಪಂಚಾಯಿತಿಯಲ್ಲಿ ಖಾತೆ ಆಗಿರುತ್ತದೆ ಎಂದು ನನಗೆ ನೆನಪಿರುವುದಿಲ್ಲ. ಆದರೆ ವಾದಿ ಕಂಪನಿ ಹೆಸರಿಗೆ ಖಾತೆ ಆಗಿರುತ್ತದೆ. ಆ ರೀತಿ ಎಷ್ಟು ವಿಸ್ತೀರ್ಣಕ್ಕೆ ಖಾತೆ ಆಗಿರುತ್ತದೆ ಎಂದರೆ ಸಾಕ್ಷಿ 1 ಎಕರೆ 30 ಗುಂಟೆಗೆ ಆಗಿರುತ್ತದೆ ಎಂದು ನುಡಿಯುತ್ತಾರೆ. ಆ ರೀತಿ 1 ಎಕರೆ 30 ಗುಂಟೆಗೆ ಖಾತೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಬಗ್ಗೆ ಮತ್ತು ಈ ದಾವೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ಪ್ರತಿವಾದಿ 1 ಮತ್ತು 2 ರವರ ಪರಿಚಯ ಇರುತ್ತದೆ. ನಮ್ಮ ಜಮೀನಿನ ಪಕ್ಕದಲ್ಲಿ ಪ್ರತಿವಾದಿ 1 ಮತ್ತು 2 ರವರಿಗೆ ಸರ್ಕಾರದಿಂದ ಭೋಗ್ಯ ಆಗಿರುವ ಕಾರಣ ಅವರನ್ನು ಪಕ್ಷಗಾರಾರನ್ನಾಗಿ ಮಾಡಿರುತ್ತೇನೆ. 3 ನೇ ಪ್ರತಿವಾದಿಯ ತಂದೆ ಹಲವಾರು ವರ್ಷಗಳಿಂದ ಕಲ್ಲು ಕ್ವಾರಿ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ.272 ರಲ್ಲಿ 30 ಗುಂಟೆ ವಿಸ್ತೀರ್ಣದಲ್ಲಿ ಸರ್ಕಾರದಿಂದ ಅನುಮತಿ ಪಡೆದು 3 ನೇ ಪ್ರತಿವಾದಿಯ ತಂದೆ ಗಣಿಗಾರಿಕೆ ಮಾಡುತ್ತಿದ್ದಾರೆ ಎಂದರೆ ಸರಿ. 3 ನೇ ಪ್ರತಿವಾದಿಯ ತಂದೆ ತೀರಿಕೊಂಡ ನಂತರ 3 ನೇ ಪ್ರತಿವಾದಿ ಮುಂದುವರಿಸುತ್ತಿದ್ದಾರೆ ಎಂದರೆ ಸರಿ. ಸರ್ವೆ ನಂ.272 ದಾವಾ ಆಸ್ತಿಯ ಪಶ್ಚಿಮಕ್ಕೆ ಅಥವಾ ಉತ್ತರಕ್ಕೆ ಬರಬಹುದು. ದಾವಾ ಆಸ್ತಿಗೂ 3 ನೇ ಪ್ರತಿವಾದಿ ಮಾಡುತ್ತಿರುವ ಗಣಿಗಾರಿಕೆ ಆಸ್ತಿಗೂ ಮಧ್ಯದಲ್ಲಿ ಎ ಖರಾಬು ಆಸ್ತಿ ಇದೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಮುಂದುವರಿದ ಪಾಟಿ ಸವಾಲಿಗೆ ಕಾಲವಕಾಶ ಕೋರಿದ್ದು, ನೀಡಲಾಯಿತು.)**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ದೇವನಹಳ್ಳಿ.**